## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ

**ಸಿಸಿ ನಂ 43/2022**

**ಸಿ.ಡಬ್ಲೂ: 13 ಪಿಡಬ್ಲೂ: 11**

| | |
|---|---|
| ಸಾಕ್ಷಿದಾರರ ಹೆಸರು | ತಿಮ್ಮರತ್ನಮ್ಮ |
| ಗಂಡನ ಹೆಸರು | ನಾಗಭೂಷಣ್ |
| ವಯಸ್ಸು | 40 ವರ್ಷ |
| ಉದ್ಯೋಗ | ಛತ್ರದ ಕೆಲಸ |
| ವಾಸ ಸ್ಥಳ | ಘಾಟಿ |

**ದಿನಾಂಕಃ 23.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರಿಂದ**

ಘಾಟಿ ಸುಬ್ರಮಣ್ಯ ಸುಮುಖ ಭವನದಲ್ಲಿ ಸುಮಾರು 15 ವರ್ಷಗಳಿಂದ ಮೇಲ್ವಿಚಾರಕಿ ಮತ್ತು ಮಾಲೀಕರಾಗಿ ಛತ್ರದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದೇನೆ. ಮದುವೆಗೆ ಛತ್ರ ಬುಕ್ ಮಾಡಿರುವ ವಿವರಗಳನ್ನು ಕೊಟ್ಟಿರುವ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ-11 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ರೂ. 44,000/- ಗಳಿಗೆ ಛತ್ರವನ್ನು ಬಾಡಿಗೆಗೆ ಕೊಟ್ಟಿರುತ್ತೇನೆ. ಪೋಲಿಸರು ಮೌಖಿಕವಾಗಿ ಕೇಳಿದ ಮೇರಗೆ ನಿಪಿ-11 ದಾಖಲೆಯನ್ನು ಕೊಟ್ಟಿರುತ್ತೇನೆ.

**(ಸಾಕ್ಷಿಯನ್ನು ಭಾಗಶಃ ಪ್ರತೀಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಅಭಿಯೋಜನೆಯು ಪಾಟೀ ಸವಾಲಿಗೆ ಅವಕಾಶ ಕೋರಿದ್ದು, ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರವರಿಂದ**

ದಿಃ 30.04.2017 ರಂದು ಸಮುಖ ಭವನದಲ್ಲಿ ತ್ರಿವೇಣಿ ಹಾಗೂ ವೆಂಕಟೇಶ್‌ರವರು ಮದುವೆ ಮಾಡಿಕೊಂಡಿರುವ ಬಗ್ಗೆ ದಿಃ 21.12.2021 ರಂದು ದಾಖಲೆ ಮಾಹಿತಿಯನ್ನು ಕೇಳಿರತ್ತಾರೆ ಅದರಂತೆ ನಾನು ಮದುವೆಗೆ ಸಂಬಂಧಿಸಿದ ಮತ್ತು ಮದುವೆಗೆ ಛತ್ರವನ್ನು ಬುಕ್

ಮಾಡಿದ ವಿವರಗಳನ್ನು ನಮೂದಿಸಿ ಮತ್ತು ಹಣದ ಮೊತ್ತವನ್ನು ನಮೂದಿಸಿ ಛತ್ರವನ್ನು ಬಾಡಿಗೆಗೆ ಕೊಟ್ಟಿರುವ ವಿಚಾರವನ್ನು ಹೇಳಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ ಮೇರೆಗೆ ರೂ. 200/- ವೆಚ್ಚಗಳೊಂದಿಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**
**ಓ ಹೇ ಕೇ ಸರಿ ಇದೆ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**